**<u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಚಿಕ್ಕಬಳ್ಳಾಪುರ</u>**

**Spl. CASE: 5/2026**

**ಪ್ರಾ.ಸಾ. 07**
**ದೋ.ಸಾ. 15**

| | | |
|---|---|---|
| ಸಾಕ್ಷಿಯ ಹೆಸರು | : | ಸತೀಶ್ |
| ತಂದೆಯ ಹೆಸರು | : | ಕರಿಯಯ್ಯ |
| ವಯಸ್ಸು | : | 35 ವರ್ಷ |
| ಉದ್ಯೋಗ | : | ಪಿ ಎಸ್ ಐ. CEN ಪಿ.ಎಸ್ ಕೆ.ಜಿ.ಎಫ್ |
| ವಾಸ | : | ಕೆ.ಜಿ.ಎಫ್ . |

**ದಿನಾಂಕ 17.06.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**<u>ಮುಖ್ಯವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ</u>**

1). ನಾನು ದಿನಾಂಕ 12.02.2024 ರಿಂದ ದಿನಾಂಕ 03.02.2026 ರ ತನಕ ನಾನು ಶಿಡ್ಲಘಟ್ಟ ಗ್ರಾಮಾಂತರ ಪಿ.ಎಸ್ ನಲ್ಲಿ ಪಿ.ಎಸ್.ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿಃ 23.11.2025 ರಂದು ಬೆಃ 3.15 ಗಂಟೆ ಸಮಯದಲ್ಲಿ ನಾನು ಠಾಣಾ ಕರ್ತವ್ಯದಲ್ಲಿದ್ದಾಗ ಪ್ರಾಸಾ-1 ಶ್ರೀನಿವಾಸ್ ಎ ಎಸ್ ಐ ರವರು ಚಾಸಾ-4 ಸಿಪಿಸಿ-310 ರವರ ಮೂಲಕ ಠಾಣೆಗೆ ಕಳುಹಿಸಿದ ಒಂದು ಲಿಖಿತ ದೂರನ್ನು ಸ್ವೀಕರಿಸಿ ಠಾಣಾ ಮೊಕದ್ದಮ್ಮೆ ಸಂಖ್ಯೆ 316/2025 ರಂತೆ ಪ್ರಕರಣವನ್ನು ದಾಖಲು ಮಾಡಿ ಪ್ರ.ವ ವರದಿಯನ್ನು ಘನ ನ್ಯಾಯಾಲಯಕ್ಕೆ ಹಾಗೂ ನಮ್ಮ ಮೇಲಾಧಿಕಾರಿಗಳಿಗೆ ಸಲ್ಲಿಸಿಕೊಂಡಿರುತ್ತೇನೆ. ಸಾಕ್ಷಿ ದೂರನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ

ನಿಪಿ–6 ಎಂದು ಗುರುತಿಸಲಾಗಿದ್ದು, ಹಿಂಬರಹ ಹಾಗೂ ಸಾಕ್ಷಿ ಸಹಿಯನ್ನು **ನಿಪಿ–6 (ಬಿ)** ಎಂದು ಗುರುತಿಸಲಾಯಿತು. ಸಾಕ್ಷಿ ಪ್ರ.ವ ವರದಿಯನ್ನು ನೋಡಿ ಗುರುತಿಸಿದ್ದು ಅದನ್ನು **ನಿಪಿ–14** ಎಂದು, ಹಿಂಬರಹ ಹಾಗೂ ಸಾಕ್ಷಿ ಸಹಿಯನ್ನು **ನಿಪಿ–14 (ಎ)** ಎಂದು ಗುರುತಿಸಲಾಯಿತು.

3. ಆ ನಂತರ ಸಂಜೆ 6.00 ಗಂಟೆ ಸಮಯದಲ್ಲಿ ಫ್ರಾಸಾ–1 ರವರು ಈ ಪ್ರಕರಣದಲ್ಲಿ ಆರೋಪಿಗಳನ್ನು ಮತ್ತು ಮಾಲುಗಳನ್ನು, ಮಹಜರ್ ಸಮೇತ ನನ್ನ ಮುಂದೆ ಹಾಜರು ಪಡಿಸಿದ್ದು, ಸ್ವೀಕರಿಸಿರುತ್ತೇನೆ. ನಂತರ ಆರೋಪಿಗಳ ವಿರುದ್ಧ ದಸ್ತಗಿರಿ ಕ್ರಮ ಅನುಸರಿಸಿ ವಶಕ್ಕೆ ಪಡೆದು, ಅವರ ಅಂಗ ಶೋಧನೆ ಮಾಡಲಾಗಿ 1 ನೇ ಆರೋಪಿಯ ಜೇಬಿನಲ್ಲಿದ್ದ ಪಾಕೇಟ್ ನಲ್ಲಿ ಒಂದು ದ್ವಿಚಕ್ರ ವಾಹನದ ಕೀ ಸಿಕ್ಕಿರುತ್ತದೆ. ನಂತರ ಅವರಗಳ ಸ್ವಇಚ್ಛಾ ಹೇಳಿಕೆಯನ್ನು ಪಡೆದಿರುತ್ತೇನೆ. 1 ನೇ ಆರೋಪಿ ತನ್ನ ಸ್ವಇಚ್ಛಾ ಹೇಳಿಕೆಯಲ್ಲಿ **"ಕೀ ಬಗ್ಗೆ ನನ್ನನ್ನು ಕೇಳಿದಾಗ ದ್ವಿಚಕ್ರ ವಾಹನದ ಮಾಹಿತಿ ನೀಡಿ ಸದರಿ ದ್ವಿಚಕ್ರ ವಾಹನ ತಾವು ಬಾಡಿಗೆ ಇದ್ದ ವಿಜಯಪುರದ ಮನೆಯ ಬಳಿ ನಿಲ್ಲಿಸಿದ್ದು ಕರೆದುಕೊಂಡು ಹೋದಲ್ಲಿ ತೋರಿಸುವುದಾಗಿ ಹೇಳಿರುತ್ತೇನೆ"** ಹೇಳಿರುತ್ತಾನೆ. ಹೇಳಿಕೆಯ ಸದರಿ ಭಾಗವನ್ನು **ನಿಪಿ–15** ಎಂದು ಸಾಕ್ಷಿಯ ಸಹಿಯನ್ನು **ನಿಪಿ–15(ಎ)** ಎಂದು ಆರೋಪಿಯ ಸಹಿಯನ್ನು **ನಿಪಿ–15(ಬಿ)** ಎಂದು ಗುರುತಿಸಲಾಯಿತು.

4. ಫ್ರಾಸಾ–1 ರವರು ಹಾಜರು ಪಡಿಸಿದ ಮಾಲನ್ನು ಸ್ವೀಕರಿಸಿಕೊಂಡು ಠಾಣಾ ಮಾಲು ಪಟ್ಟಿ ಸಂಖ್ಯೆ 244/2025 ರಲ್ಲಿ ಅಳವಡಿಸಿಕೊಂಡು ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ನಂತರ ಈ ಪ್ರಕರಣದಲ್ಲಿ ತನಿಖೆಯಲ್ಲಿ ಭಾಗವಹಿಸಿ ಫ್ರಾಸಾ–2 ಮತ್ತು ಚಾಸಾ–3 ರವರ ಹೇಳಿಕೆಗಳನ್ನು ದಾಖಲಿಸಿರುತ್ತೇನೆ. ಪಂಚನಾಮೆ ಕಾಲಕ್ಕೆ ನಮ್ಮ ಸಿಬ್ಬಂದಿ ಚಾಸಾ–8 ರವರು ಅವರಿಗೆ ಸೇರಿದ Oppo ಕಂಪನಿಯ ಪೋಟೋಗಳನ್ನು ಮತ್ತು ವಿಡಿಯೋಗಳನ್ನು ತೆಗೆದಿದ್ದು, ಅವುಗಳನ್ನು ಪ್ರಿಂಟ್ ಹಾಕಿಸಿ,

ಪೋಟೋಗಳನ್ನು ಹಾಗೂ ಸಿಡಿ ಗೆ ವರ್ಗಾಯಿಸಿ ನೀಡಿದ್ದನ್ನು ಸ್ವೀಕರಿಸಿ ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಅದೇ ರೀತಿ ಅವರಿಂದ ಈ ಬಗ್ಗೆ ಕಲಂ 63(4)(c) BSA ಅಡಿ ಪ್ರಮಾಣ ಪತ್ರವನ್ನು ಸ್ವೀಕರಿಸಿದ್ದು, ಅದನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿ ಸದರಿ ಪ್ರಮಾಣ ಪತ್ರವನ್ನು ನೋಡಿ ಗುರುತಿದ್ದು, ಅದನ್ನು **ನಿಪಿ-16** ಎಂದು, ಸಾಕ್ಷಿಯ ಸಹಿಯನ್ನು **ನಿಪಿ-16(ಎ)** ಹಾಗೂ ಸಿಬ್ಬಂದಿಯ ಸಹಿಯನ್ನು **ನಿಪಿ-16(ಬಿ)** ಎಂದು ಗುರುತಿಸಲಾಯಿತು. ಸಾಕ್ಷಿ ನಿಪಿ-5 ರಲ್ಲಿರುವ ಪೋಟೋಗಳನ್ನು ನೋಡಿ ಗುರುತಿಸಿರುತ್ತಾರೆ. ನಿಪಿ-13 ರ ಸಿಡಿ ಯನ್ನು ಪ್ರದರ್ಶಿಸಲಾಗಿ ಸಾಕ್ಷಿಯು ಅವುಗಳಲ್ಲಿರುವ ಪೋಟೋ ಮತ್ತು ವಿಡಿಯೋ ಕ್ಲಿಪಿಂಗ್ ಅನ್ನು ನೋಡಿ ಗುರುತಿಸಿರುತ್ತಾರೆ.

5. ಈಗಾಗಲೇ ಅವೇಳೆಯಾದ್ದರಿಂದ ಆರೋಪಿಗಳನ್ನು ಸುರಕ್ಷಿತ ಬಂಧನದಲ್ಲಿ ಠಾಣೆಯಲ್ಲಿರಿಸಿರುತ್ತೇನೆ. ಮರುದಿನ ಬೆಳಗ್ಗೆ 1 ನೇ ಆರೋಪಿಯನ್ನು ನಾನು ಹಾಗೂ ಠಾಣಾ ಸಿಬ್ಬಂದಿಯವರು ವಿಜಯಪುರದಲ್ಲಿರುವ ಆತನ ಬಾಡಿಗೆ ಮನೆಯ ಬಳಿ ಕರೆದುಕೊಂಡು ಹೋಗಿರುತ್ತೇನೆ. ನಂತರ ಅಲ್ಲಿಗೆ ಪಂಚರನ್ನು ಬರ ಮಾಡಿಕೊಂಡು ವಿಚಾರವನ್ನು ತಿಳಿಸಿ ನಿಪಿ-7 ರಂತೆ ನೋಟೀಸ್ ಜಾರಿ ಮಾಡಿರುತ್ತೇನೆ. ಆ ನಂತರ 1 ನೇ ಆರೋಪಿಯು ಆತನ ಮನೆಯ ಮುಂದೆ ನಿಲ್ಲಿಸಿದ ಒಂದು ನೀಲಿ ಮತ್ತು ಕೆಂಪು ಬಣ್ಣದ ಹೊಂಡ ಡಿಯೊ ದ್ವಿಚಕ್ರ ವಾಹನ ಸಂಖ್ಯೆ KA-50/EC-1696 ಅನ್ನು ಹಾಜರು ಪಡಿಸಿ ಸದರಿ ದ್ವಿಚಕ್ರ ವಾಹನದಲ್ಲಿ ಗಾಂಜಾ ಮಾಲನ್ನು ಸಾಗಿಸಿರುವುದಾಗಿ ತಿಳಿಸಿದನು. ನಂತರ ಸದರಿ ದ್ವಿಚಕ್ರ ವಾಹನವನ್ನು ಸಂಜೆ 3.30 ರಿಂದ 4.15 ರ ನಡುವೆ ಪಂಚನಾಮೆ ಕ್ರಮ ಮೂಲಕ ಜಪ್ತು ಪಡಿಸಿ, ಪಂಚರ ಸಹಿ ಪಡೆದಿರುತ್ತೇನೆ. ಈ ಬಗ್ಗೆ ಪೋಟೋಗಳನ್ನು ತೆಗೆದಿದ್ದು, ಅವುಗಳನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿ ನಿಪಿ-7, ನಿಪಿ-8 ದಾಖಲೆಗಳನ್ನು, ಸಹಿಗಳನ್ನು ಮತ್ತು ನಿಪಿ-9 ರಲ್ಲಿರುವ ಪೋಟೋಗಳನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿ ಸಹಿಯನ್ನು **ನಿಪಿ-7(ಸಿ)** ಮತ್ತು **ನಿಪಿ-8(ಸಿ)** ಎಂದು

ಗುರುತಿಸಲಾಯಿತು. ಸದರಿ ಫೋಟೋಗಳನ್ನು ಚಾಸಾ-11 ರವರು ತಮ್ಮ Vivo company ಮೊಬೈಲ್ ನಲ್ಲಿ ತೆಗೆದಿದ್ದು, ಅವುಗಳ ಫೋಟೋಗಳನ್ನು ಪ್ರಿಂಟ್ ಹಾಕಿಸಿ ಸಿಡಿ ಗೆ ವರ್ಗಾಯಿಸಿ ನನಗೆ ನೀಡಿರುತ್ತಾರೆ. ಈ ಬಗ್ಗೆ ಕಲಂ 63(4)(c) BSA ಅಡಿ ಪ್ರಮಾಣ ಪತ್ರವನ್ನು ಸ್ವೀಕರಿಸಿದ್ದು, ಅದನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿ ಸದರಿ ಪ್ರಮಾಣ ಪತ್ರವನ್ನು ನೋಡಿ ಗುರುತಿದ್ದು, ಪ್ರಮಾಣ ಪತ್ರವನ್ನು **ನಿಪಿ-17** ಎಂದು, ಸಾಕ್ಷಿಯ ಸಹಿಯನ್ನು **ನಿಪಿ-17(ಎ)** ಹಾಗೂ ಸಿಬ್ಬಂದಿಯ ಸಹಿಯನ್ನು **ನಿಪಿ-17(ಬಿ),** ಸಿಡಿಯನ್ನು **ನಿಪಿ-18** ಎಂದು ಗುರುತಿಸಲಾಯಿತು. ಸಾಕ್ಷಿ ನಿಪಿ-18 ರಲ್ಲಿರುವ ಪೋಟೋಗಳನ್ನು ನೋಡಿ ಗುರುತಿಸಿರುತ್ತಾರೆ. ಅಮನಾತ್ತು ಪಡಿಸಿದ ದ್ವಿಚಕ್ರ ವಾಹವನ್ನು ಪಿ.ಎಫ್. ಸಂಖ್ಯೆ 245/2025 ರಲ್ಲಿ ಅಳವಡಿಸಿ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ.

6. ನಂತರ ಅದೇ ದಿನ ಆರೋಪಿಗಳನ್ನು ವೈಧ್ಯಕೀಯ ತಪಾಸಣೆಗೆ ಒಳಪಡಿಸಿ, ರಿಮ್ಯಾಂಡ್ ಅರ್ಜಿಯೊಂದಿಗೆ ಅದೇ ದಿನ ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆ. ಸಾಕ್ಷಿ ನ್ಯಾಯಾಲಯದ ವಿ.ಸಿ.ಟಿವಿಯಲ್ಲಿ ಕಾಣುವ 1 ನೇ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ. ಮತ್ತೊಬ್ಬ ಆರೋಪಿಯನ್ನು ನೋಡಿದರೆ ಗುರುತಿಸುವುದಾಗಿ ನುಡಿದಿದ್ದು, ಆತನನ್ನು ಚಿಕಿತ್ಸೆಗಾಗಿ ಆಸ್ಪತ್ರೆಗೆ ಸೇರಿಸಿರುವ ಕಾರಣ, ಜೈಲು ಸಿಬ್ಬಂದಿಯವರು ಹಾಜರುಪಡಿಸಿರುವುದಿಲ್ಲ. 2 ನೇ ಆರೋಪಿಯ ಗುರುತಿಸುವಿಕೆಗೆ ಯಾವುದೇ ತಕರಾರು ಇಲ್ಲವೆಂದು ಆರೋಪಿ ಪರ ವಕೀಲರು ತಿಳಿಸಿರುತ್ತಾರೆ.

7. ದಿನಾಂಕ 25.11.2025 ರಂದು ಅಮಾನತ್ತು ಪಡಿಸಿಕೊಂಡಿದ್ದ ಮಾಲಿನ Correctness Certificate ಪಡೆದುಕೊಳ್ಳಲು ಮಾನ್ಯ ಪ್ರಧಾನ ಮತ್ತು ಜೆ.ಎಮ್.ಎಫ್.ಸಿ ಶಿಡ್ಲಘಟ್ಟ ನ್ಯಾಯಾಧೀಶರ ಮುಂದೆ ಮನವಿ ಸಲ್ಲಿಸಿರುತ್ತೇನೆ.

ಈ ಹಂತದಲ್ಲಿ ಮುಂದಿನ ಮುಖ್ಯ ವಿಚಾರಣೆಗೆ ಸಮಯಾವಕಾಶ ಕೋರಿದ್ದು, ನೀಡಿಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

Sd/-
**(ಟಿ. ಪಿ. ರಾಮಲಿಂಗೇ ಗೌಡ)**
**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ಚಿಕ್ಕಬಳ್ಳಾಪುರ.**